# ಎಲೆ ಮರೆಯ ಹೂವು

❖ ಸರಸ್ವತಿ ವಿಜಯನಾರಸಿಂಹ

**ಮೇ**ಲುಕೋಟೆಯ ಬಳಿಯ ಹಳೇಬೀಡು ಗ್ರಾಮದ ಶ್ಯಾನುಭೋಗರಾದ ಕೃಷ್ಣಶಾಸ್ತ್ರಿ ಮತ್ತು ಸಾವಿತ್ರಮ್ಮ ಅವರ ದೊಡ್ಡ ಕುಟುಂಬದಲ್ಲಿ ೧೯೨೦ರ ಅಕ್ಷಯತದಿಗೆಯಂದು ಜನಿಸಿದರು ವಿಶಾಲಾಕ್ಷಮ್ಮ. ಊರಿನ ಶ್ಯಾನುಭೋಗರೂ ಒಳ್ಳೆಯ ಜ್ಯೋತಿಷಿಯೂ ಆಗಿದ್ದ ಶಾಸ್ತ್ರಿಗಳ ಜೀವನ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಸರಳ ಸುಂದರವಾಗಿತ್ತು. ಹಳ್ಳಿಯಲ್ಲೂ ಇವರ ಮಾತಿಗೆ ಎದುರಿಲ್ಲ. ತಾಯಿ ಸಾವಿತ್ರಮ್ಮ ದೈವಭಕ್ತೆ, ಸಾತ್ವಿಕ ಸ್ವಭಾವದವರು. ವಿಶಾಲಾಕ್ಷಿ ಆಗಿನ ಕಾಲದ ಸಂಪ್ರದಾಯದಂತೆ ಚಿಕ್ಕ ವಯಸ್ಸಿಗೇ ಮದುವೆಯಾಗಿ ಹದಿನಾಲ್ಕು ವರ್ಷಕ್ಕೇ ಪತಿಯೊಂದಿಗೆ ತುಮಕೂರಿನಲ್ಲಿ ಗೃಹಿಣಿಯ ಹೊಣೆ ಹೊತ್ತರು. ಗೃಹ ಕೈಗಾರಿಕೋದ್ಯಮಿ ಶ್ರೀ ಹೊಸೂರು ನಂಜಪ್ಪಯ್ಯನವರು ತಮ್ಮ ಪುಟ್ಟದಾದ ಊದುಬತ್ತಿ ಕಾರ್ಖಾನೆಯನ್ನು ಸತತ ಪರಿಶ್ರಮ ಮತ್ತು ಆಸಕ್ತಿಯಿಂದ ನಡೆಸಿಕೊಂಡು ಬರುತ್ತಿದ್ದರು. ಪತಿಯ ಈ ಉದ್ಯಮದಲ್ಲಿ ವಿಶಾಲಾಕ್ಷಮ್ಮ ಪೂರ್ಣ ಮನಸ್ಸಿನಿಂದ ಸಹಭಾಗಿಯಾದರು.

ಹೆಚ್ಚು ಮಿತ್ರರನ್ನೂ ಬಂಧುಗಳನ್ನೂ ಪಡೆದಿದ್ದ ನಂಜಪ್ಪಯ್ಯನವರು ಮೈಸೂರಿನತ್ತ ಆಕರ್ಷಿತರಾಗಿ ತಮ್ಮ ಕುಟುಂಬವನ್ನು ಮೈಸೂರಿಗೇ ಕರೆತಂದರು. ಆಗ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದತ್ತ ವಿಶಾಲಾಕ್ಷಮ್ಮ ಆಕರ್ಷಿತರಾದರು. ತಮ್ಮ ಸ್ನೇಹಿತರಾದ ಕಲಾಭವನಂ ಸೂರ್ಯನಾರಾಯಣರಾವ್ ಮತ್ತು ಪಾರ್ವತಮ್ಮರವರ ನಾಯಕತ್ವದಲ್ಲಿ ಚಳವಳಿಯಲ್ಲಿ ಪಾಲ್ಗೊಂಡರು. ದಿಟ್ಟ ಸ್ವಭಾವದ ಹದಿಹರೆಯದ ವಿಶಾಲಾಕ್ಷಮ್ಮನವರಿಗೆ ಪತಿಯ ಸಹಕಾರ ದೊರಕಿತು. ಸಾವಿರಾರು ಜನರ ಗುಂಪು ನಗರದ ಹ್ಯಾಮಿಲ್ಟನ್ ಬಿಲ್ಡಿಂಗ್‌ನತ್ತ ನಡೆಯಿತು. ಜೈಕಾರ ಮಾಡುತ್ತ ಮುಂಚೂಣಿಯಲ್ಲಿದ್ದ ಈ ವೀರವನಿತೆಯ ಕೊರಳಿಗೆ ಹಾರ ಹಾಕಿ ದೇಶಬಾಂಧವರು ಆರತಿ ಬೆಳಗಿದರು.

೧೯೩೮ರಲ್ಲಿ ಹ್ಯಾಮಿಲ್ಟನ್ ಬಿಲ್ಡಿಂಗ್‌ನ ಹೆಸರು ಬದಲಾಯಿಸುವ ಕಾರ್ಯಕ್ರಮವನ್ನು ಈ ಚಳುವಳಿಗಾರರು ಹಮ್ಮಿಕೊಂಡಿದ್ದರು. ಎಳೆಯ ಬಾಣಂತಿ ವಿಶಾಲಾಕ್ಷಮ್ಮ ಈ ಕೆಲಸ ನಿಭಾಯಿಸಬಲ್ಲಳೆಂದು ಎಲ್ಲರಿಗೂ ದೃಢವಾಯಿತು. ಎಲ್ಲರ ಪಾರೈಕೆಯನ್ನು ಪೂರ್ಣಗೊಳಿಸುವ ಧೈರ್ಯ ತೋರಿದ ವಿಶಾಲಾಕ್ಷಮ್ಮ ೨೪ ದಿನಗಳ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು, ಒಂದು ಕೈಯಲ್ಲಿ ಸುಣ್ಣದ ಡಬ್ಬ, ಮತ್ತೊಂದು ಕೈಯಲ್ಲಿ ದಪ್ಪನೆಯ ಕುಂಚವನ್ನು ಹಿಡಿದು, ಏಣಿಯೇರಿ ಹೋಗಿ ಹ್ಯಾಮಿಲ್ಟನ್ ಬಿಲ್ಡಿಂಗ್‌ನ ಹೆಸರು ಅಳಿಸುವ ಕಾರ್ಯದಲ್ಲಿ ಯಶಸ್ವಿನಿಯಾದರು. ಆಗಿನ ಬ್ರಿಟಿಷ್ ಸರ್ಕಾರ ಈ ಎಳೆಯ ಬಾಣಂತಿಯನ್ನು ಬಂಧಿಸಿ ಕಾರಾಗೃಹದಲ್ಲಿರಿಸಿತು. ವಿಶಾಲಾಕ್ಷಮ್ಮ ವಿಚಲಿತರಾಗಲಿಲ್ಲ. ಬಿಡುಗಡೆ ಪಡೆದು ಹೊರ ಬಂದ ನಂತರ ಎಲ್ಲರೂ ಈಕೆಯ ದಿಟ್ಟತನವನ್ನು ಮನಃಪೂರ್ವಕ ಹೊಗಳಿದರು.

ಕೆಲವು ವರ್ಷಗಳ ನಂತರ ತಮ್ಮ ಪತಿ ಇದ್ದಕ್ಕಿದ್ದಂತೆ ತೀರಿಕೊಂಡಾಗ, ವಿಶಾಲಾಕ್ಷಮ್ಮ ದಿಗ್ಭ್ರಾಂತರಾದರು. ಆ ದಿನಗಳಲ್ಲಿ ಆಕೆಯನ್ನು ಸಂತೈಸಲು ಬಂದ ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಸೋಮನಾಥಾನಂದಜಿಯವರ ಮಾತುಗಳು ಆಕೆಯನ್ನು ಮತ್ತೆ ಸಹಜ ಸ್ಥಿತಿಗೆ ತರಲು ತುಂಬ ಸಹಕಾರಿಯಾದವು. "ಹುಟ್ಟು ಸಾವು ಮಾನವಜೀವನದಲ್ಲಿ ಸಹಜ. ಕರ್ತವ್ಯನಿಷ್ಠೆ ನಿಮ್ಮಲ್ಲಿ ತುಂಬಾ ಚೆನ್ನಾಗಿದೆ. ನಿಮ್ಮಿಂದ ಸಮಾಜಕ್ಕೇನಾದರೂ ಒಳ್ಳೆಯದಾಗುವುದನ್ನು ಮಾಡಿ" ಎಂದರು ಸ್ವಾಮಿಜಿ. "ನಿಮ್ಮ ದಿಟ್ಟತನದಲ್ಲಿ ನಿಮ್ಮವರಿಗೂ ನಂಬಿಕೆಯಿತ್ತು. ಅದನ್ನು ಉಳಿಸಿಕೊಳ್ಳಿ" ಎಂದು ಹೇಳುತ್ತ ಅವರಲ್ಲಿದ್ದ ಸುಪ್ತ ಚೇತನವನ್ನು ಜಾಗೃತಗೊಳಿಸಿದರು. ಸ್ವಾಮಿಜಿಯ ಮಾತುಗಳು ವಿಶಾಲಾಕ್ಷಮ್ಮನವರನ್ನು ಎಚ್ಚರಗೊಳಿಸಿದವು. ನಂಜಪ್ಪಯ್ಯನವರು ಒಳ್ಳೆಯ ವೇದಾಂತಿಗಳಾಗಿದ್ದರು. ಗೋಪುರದ ಗೊಂಬೆ ಎನ್ನುವ ತಮ್ಮ ಕವನ ಸಂಗ್ರಹದಲ್ಲಿ ಜೀವನವನ್ನು ಗೋಪುರದ ಗೊಂಬೆಗೆ ಹೋಲಿಸಿ, ಕಾಲದ ಮಹಾಸಾಗರದಲ್ಲಿ ಅದು ಎಷ್ಟು ಕ್ಷಣಿಕ ಎಂಬುದನ್ನು ಬಣ್ಣಿಸಿದ್ದಾರೆ. ಸ್ವಾಮಿ ಸೋಮನಾಥಾನಂದಜಿಯವರಿಂದ ಪ್ರಭಾವಿತರಾದ ವಿಶಾಲಾಕ್ಷಮ್ಮ ರಾಮಕೃಷ್ಣ ಆಶ್ರಮದ ಕಾರ್ಯಕ್ರಮಗಳಲ್ಲಿ ನಿಷ್ಠೆಯಿಂದ ಭಾಗವಹಿಸಲಾರಂಭಿಸಿದರು. ಹಲವಾರು ಬಡ ವಿದ್ಯಾರ್ಥಿಗಳಿಗೆ ನೆರವಾದರು, ಬಡ ಹೆಣ್ಣು ಮಕ್ಕಳ ಮದುವೆ ಮಾಡಿಸಿದರು. ಆದರೂ ತಾನು ಇನ್ನೂ ಏನೋ ಮಾಡಬೇಕು ಎಂದು ಅವರಿಗೆ ಎನ್ನಿಸುತ್ತಲೇ ಇತ್ತು.

ಕ್ರಿಶ್ಚಿಯನ್ ಸಿಸ್ಟರ್ಸ್ ನಡೆಸುತ್ತಿದ್ದ 'ಮರ್ಸಿ ಹೋಮ್'ಗೆ ಸಹಾಯ ನೀಡುತ್ತಿದ್ದ ವಿಶಾಲಾಕ್ಷಮ್ಮ ಒಮ್ಮೆ ಅವರ ಆಹ್ವಾನದಂತೆ ಆ ಸಂಸ್ಥೆಯನ್ನು ನೋಡಿಬರಲು ಹೊರಟರು. ಅಲ್ಲೆಲ್ಲಾ ಸುತ್ತಿ ನೋಡಿದರು. ತಾವೂ ಏಕೆ ಇಂಥ ಒಂದು ಸಂಸ್ಥೆ ನಡೆಸಬಾರದು ಎಂದೆನಿಸಿತು. ಸ್ವಾಮಿಜಿಯವರನ್ನು ನೆನೆಸಿಕೊಂಡರು. ಅಲ್ಲಿದ್ದವರ ಪೈಕಿ ನಾಗಮ್ಮ ಮತ್ತು



ದೇಶದ ಮೇಲಿನ ಅಪಾರ ಅಭಿಮಾನದಿಂದ ಜೀವದ ಹಂಗನ್ನೂ ತೊರೆದು ತನ್ನ ದೇಶಭಕ್ತಿಯನ್ನು ಮೆರೆದ ಸಾಹಸಮಯ ಮಹಿಳೆಯೊಬ್ಬಳ ಮನಮುಟ್ಟುವ ಪ್ರಸಂಗವನ್ನು ವಿವರಿಸಿ ಸ್ಫೂರ್ತಿದಾಯಕವಾದ ಆಕೆಯ ವ್ಯಕ್ತಿತ್ವದ ಚಿತ್ರಣವನ್ನು ನೀಡಿರುವ ಶ್ರೀಮತಿ ಸರಸ್ವತಿಯವರು ಚಲನಚಿತ್ರರಂಗದಲ್ಲಿ ಸಂಗೀತ ನಿರ್ದೇಶಕರಾಗಿ ಖ್ಯಾತರಾದ ದಿವಂಗತ ಶ್ರೀ ವಿಜಯ ನಾರಸಿಂಹ ಅವರ ಧರ್ಮಪತ್ನಿ.



ಅಭಿನವ ವಿದ್ಯಾಭಾರತಿ ವೃದ್ಧ ಸೇವಾಶ್ರಮದಲ್ಲಿರುವ ವೃದ್ಧ ಮಹಿಳೆಯರೊಂದಿಗೆ ವಿಶಾಲಾಕ್ಷಮ್ಮನವರು

ಭಾಗೀರಥಮ್ಮನವರತ್ತ ಇವರ ದೃಷ್ಟಿ ಬಿತ್ತು. ಕಾಯಿಲೆಯಿಂದ ನರಳುತ್ತಿದ್ದರೂ, ಒಲ್ಲದ ಮಾಂಸಾಹಾರಕ್ಕೆ ವಿರೋಧ ವ್ಯಕ್ತ ಪಡಿಸುತ್ತಿದ್ದ ಅವರನ್ನು ಸಮೀಪಿಸಿದರು. ಅಲ್ಲಿನ ಸಂಚಾಲಕಿಯನ್ನು ಭೇಟಿಯಾದರು. ಆಕೆಯ ಅಪ್ಪಣೆ ಪಡೆದು ಅವರಿಬ್ಬರನ್ನೂ ತಮ್ಮೊಂದಿಗೆ ಕರೆತಂದರು. ಆಗ ಮೈಸೂರಿನ ಶಂಕರಮಠದಲ್ಲಿ ಕೆಲವು ಕಾರ್ಯಕ್ರಮಗಳನ್ನು ನಡೆಸಲು ಬಂದಿದ್ದ ಶ್ರೀ ಶೃಂಗೇರಿ ಜಗದ್ಗುರುಗಳ ಸಮ್ಮುಖ ಆ ಇಬ್ಬರು ಹಿರಿಯ ಮಹಿಳೆಯರನ್ನೂ ನಿಲ್ಲಿಸಿದರು. ಸಂಪ್ರದಾಯದ ಚೌಕಟ್ಟಿನಲ್ಲಿ ಬಂದ ಆ ಜೀವಿಗಳು ದೇಹಧಾರಣೆಗಾಗಿ ಧರ್ಮವಿರೋಧಿಯಾಗಿ ಬದುಕಲಾರೆವೆಂಬುದನ್ನು ಜಗದ್ಗುರುಗಳಲ್ಲಿ ಅರಿಕೆ ಮಾಡಿಕೊಂಡರು. **ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ** ಎಂದು ನುಡಿದ ಸದ್ಗುರು ಅವರಿಬ್ಬರ ಬಗ್ಗೆ ಮರುಕ ತೋರಿದರು. ಶೃಂಗೇರಿ ಮಠಕ್ಕೆ ಸೇರಿದ್ದ ಮನೆಯೊಂದರಲ್ಲಿ ಆ ವೃದ್ಧೆಯರ ವಾಸಕ್ಕೆ ಅವಕಾಶ ಮಾಡಿಕೊಟ್ಟು ವಿಶಾಲಾಕ್ಷಮ್ಮನವರನ್ನು ಆ ವ್ಯವಸ್ಥೆಯ ಮೇಲ್ವಿಚಾರಕಿಯನ್ನಾಗಿ ನೇಮಿಸಿದರು.

ಅಂದಿನಿಂದ ದಿಕ್ಕಿಲ್ಲದ ವೃದ್ಧರ ಹೊಣೆ ಇವರದ್ದಾಯಿತು. ಕ್ರಮಕ್ರಮವಾಗಿ ಆಶ್ರಮ ಬೆಳೆಯಲಾರಂಭಿಸಿತು. ವೃದ್ಧರ ಸಂಖ್ಯೆ ೫೦ಕ್ಕೂ ಹೆಚ್ಚಾಯಿತು. ಆಶ್ರಮಕ್ಕಾಗಿ ಸ್ವಂತ ಕಟ್ಟಡ ಕಟ್ಟಿಸಿದರು. ಗುರುಗಳ ಹೆಸರಿನಲ್ಲಿ ಕಟ್ಟಿಸಿದ ಈ ಸಂಸ್ಥೆ 'ಅಭಿನವ ವಿದ್ಯಾಭಾರತಿ ವೃದ್ಧ ಸೇವಾಶ್ರಮ' ಎಂಬ ಹೆಸರಿನಿಂದ ಅವರ ಅಮೃತಹಸ್ತದಿಂದಲೇ ಉದ್ಘಾಟನೆಯಾಯಿತು. ಈಗ ನೂರಕ್ಕೂ ಹೆಚ್ಚಾಗಿರುವ ಈ ವೃದ್ಧಾಶ್ರಮದ ವಾಸಿಗಳು ಪರಸ್ಪರ ಮೈತ್ರಿಯಿಂದಿದ್ದಾರೆ. ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ನೆರವಾಗುತ್ತಾರೆ; ತಮಗೆಲ್ಲ ತಣ್ಣನೆಯ ನೆರಳು ನೀಡಿರುವ ಆ ತಾಯಿಯನ್ನು ಸದಾ ನೆನೆಯುತ್ತಾರೆ. ಆಶ್ರಮದ ನಿಯಮಗಳಿಗೆ ಬದ್ಧರಾಗಿ ಆಶ್ರಮದ ಸರ್ವಾಂಗೀಣ ಉದ್ಧಾರಕ್ಕೆ ನೆರವಾಗುತ್ತಿದ್ದಾರೆ. ಮತಾಂಧತೆ, ಜಾತೀಯತೆಯ ಸೋಂಕೂ ವಿಶಾಲಾಕ್ಷಮ್ಮನವರಲ್ಲಿ ಇರಲಿಲ್ಲ. ಆಶ್ರಮದಲ್ಲಿ ದೇಹತ್ಯಾಗ ಮಾಡಿದ ವೃದ್ಧರ ಅಪರ ಕರ್ಮಗಳನ್ನು ಶ್ರದ್ಧೆಯಿಂದ ನಡೆಸಲೂ ಸೂಕ್ತ ವ್ಯವಸ್ಥೆ ಇದೆ.

ಕೈಲಾಗದವರಿಗೆ ಇಲ್ಲಿ ಎಲ್ಲ ನೆರವೂ ದೊರೆಯುತ್ತದೆ; ಓಡಾಡಲು ಚೈತನ್ಯವಿದ್ದು ಗಟ್ಟಿಮುಟ್ಟಾಗಿ ಇರುವವರಿಗೆ ಆಶ್ರಮದ ಕೆಲಸಗಳಲ್ಲಿ ಹೊಣೆಗಾರಿಕೆಯೂ ಇದೆ. ಸಾಂಸಾರಿಕ ಜೀವನದಿಂದ ಬೇಸರಗೊಂಡ ವೃದ್ಧರನ್ನು ಆಶ್ರಮದ ಕೆಲಸಗಳಲ್ಲಿ ಉತ್ಸಾಹಿಗಳಾಗಿ ಪಾಲುಗೊಳ್ಳುವಂತೆ ಮಾಡುವಲ್ಲಿ ವಿಶಾಲಾಕ್ಷಮ್ಮ ನಿಷ್ಣಾತೆಯಾಗಿದ್ದರು. ದಿಕ್ಕಿಲ್ಲದ ಇಬ್ಬರು ಮೂವರು ಅಂಗವಿಕಲರಿಗೂ ಇಲ್ಲಿ ಕೈತುಂಬಾ ಕೆಲಸ. ತನ್ನ ವೀಲ್‌ಚೇರ್‌ನಲ್ಲಿಯೇ ಮೈಸೂರೆಲ್ಲ ಸುತ್ತಿಬರುವ ಆಶ್ರಮವಾಸಿ ನಾಗೇಶನಿಗೆ ತಿಳಿಯದ ವಿಷಯವಿಲ್ಲ. ಯಾವ ಅಂಗಡಿಯಲ್ಲಿ ಶ್ರೇಷ್ಠವಾದ ದಿನಸಿ ನ್ಯಾಯಬೆಲೆಗೆ ದೊರಕುತ್ತದೆ, ಔಷಧಿ ವ್ಯಾಪಾರಿಗಳಲ್ಲಿ ಯಾರು ಗುಣಮಟ್ಟದ, ಕಾಲಾವಧಿ ತೀರದ ಔಷಧಿ ಮಾರುತ್ತಾರೆ ಎಂಬುದೆಲ್ಲಾ ಅವನಿಗೆ ಚೆನ್ನಾಗಿ ಗೊತ್ತು. ಒಮ್ಮೆ ನೀರಿನ ಬಿಲ್ಲು ಹತ್ತಾರು ಸಾವಿರದಷ್ಟು ಬಂದಾಗ ಜಲಮಂಡಳಿಗೆ ಅಲೆದಲೆದು ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡು 'ಅಮ್ಮ' ಕೊಟ್ಟ ಮನವಿಪತ್ರ ಸಲ್ಲಿಸಿ ಬಂದ. ಸ್ಥಳಕ್ಕೆ ಬಂದು ಕೂಲಂಕಷವಾಗಿ ತನಿಖೆ ನಡೆಸಿದ ಅಧಿಕಾರಿಗಳು 'ಅಮ್ಮ'ನ ದಕ್ಷತೆಯನ್ನು ಮೆಚ್ಚಿ ನೀರಿನ ದುಬಾರಿ ಬಿಲ್ಲನ್ನು ನ್ಯಾಯವಾಗಿ ಮಾಡಿಕೊಟ್ಟು, ಮಾನವೀಯತೆ ತೋರಿದರು.

ರಾಮಕೃಷ್ಣ ಮಠದ ೧೧ನೇ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ವೀರೇಶ್ವರಾನಂದಜಿಯವರಿಂದ ವಿಶಾಲಾಕ್ಷಮ್ಮ ಮಂತ್ರೋಪದೇಶ ಪಡೆದಿದ್ದರು. ಜಪವನ್ನು ನಿಷ್ಠೆಯಿಂದ ಅನುಷ್ಠಾನದಲ್ಲಿರಿಸಿಕೊಂಡಿದ್ದರು. ಎಂಥ ಧೃತಿಗೆಡುವ ಸಂದರ್ಭದಲ್ಲಿಯೂ ವಿಚಲಿತರಾಗದೆ ಮಂತ್ರಜಪ ಮಾಡುತ್ತಲೇ ಇದ್ದರು.

ತಮ್ಮ ಪ್ರಾಣದ ಹಂಗು ತೊರೆದುದೇ ಅಲ್ಲದೆ ಎಳೆಯ ಕಂದನ ಬಗ್ಗೆಯೂ ಆಲೋಚಿಸದೆ ಹೋರಾಟಕ್ಕಿಳಿದ ಈಕೆಯ ಧೈರ್ಯವನ್ನು ಮೆಚ್ಚಿ ಸ್ವಾತಂತ್ರ್ಯ ಹೋರಾಟಗಾರ್ತಿ ವಿಶಾಲಾಕ್ಷಮ್ಮನವರನ್ನು ಸನ್ಮಾನಿಸಲು ಕೇಂದ್ರ ಸರ್ಕಾರದಿಂದ ಆಹ್ವಾನ ಬಂದಿತು. ಆದರೆ ವಿಶಾಲಾಕ್ಷಮ್ಮ ವೃದ್ಧಾಶ್ರಮದಲ್ಲಿದ್ದ ಕೆಲವರ ದೇಹಸ್ಥಿತಿ ಚಿಂತಾಜನಕವಾಗಿದ್ದುದರಿಂದ ತಾವು ಬರಲಾಗುವುದಿಲ್ಲ ಎಂದು ಉತ್ತರಿಸಿ ಆ ಸನ್ಮಾನವನ್ನು ಸ್ವೀಕರಿಸಲೇ ಇಲ್ಲ. ರಾಷ್ಟ್ರೀಯ ಪತ್ರಾಗಾರದಲ್ಲಿ ವಿಶಾಲಾಕ್ಷಮ್ಮನವರ ನಲವತ್ತರ ದಶಕದ ಹೋರಾಟದ ದಾಖಲೆ ಇದೆ. ಆಕೆಯ ಧ್ವನಿ ಮುದ್ರಿಕೆಯೂ ಇದೆ.

ವೃದ್ಧಾಪ್ಯದಲ್ಲಿ ಮಿದುಳಿನ ರಕ್ತ ಸಂಚಾರದಲ್ಲಿ ತೊಂದರೆಯಾಗಿ ಆಸ್ಪತ್ರೆ ಸೇರಿ ತೀವ್ರ ನಿಗಾ ಘಟಕದಲ್ಲಿ ಒಂದು ವಾರ ವಿದ್ದರು. ಪ್ರಜ್ಞಾಶೂನ್ಯ ಸ್ಥಿತಿಯಲ್ಲಿದ್ದರೂ ಸುಷುಪ್ತಾವಸ್ಥೆಯಲ್ಲಿಯೂ ನಾಮಜಪ ನಡೆಯುತ್ತಲೇ ಇತ್ತು. ತುಟಿಗಳು ಚಲಿಸುತ್ತಲೇ ಇದ್ದುವು. ಇದು ಆಕೆಯ ಅಸಾಮಾನ್ಯ ವ್ಯಕ್ತಿತ್ವಕ್ಕೆ ನಿದರ್ಶನ. ಭಕ್ತಿಯ ತಳಹದಿಯಿಂದ ಸುಭದ್ರವಾಗಿದ್ದ ಈ ಧೀರ ನಾರಿ ೧೩.೦೪.೨೦೦೫ರಂದು ತೀರಿಕೊಂಡರು. *